# ಚೂಟಿ ಪುಟಾಣಿ ಮಿಲನಾ

**ಈ ಪುಟಾಣಿ, ಮಾತಿನಲ್ಲಿ ಬಹುಪ್ರಬುದ್ಧೆ. 'ಭರ್ಜರಿ' ಸಿನಿಮಾ ಮೂಲಕ ಹಿರಿತೆರೆಯಲ್ಲಿ ಮುದ್ದಾದ ಮುಖದರ್ಶನ ಮಾಡಿರುವ ಇವಳು 'ಶನಿ'ಯ ತಂಗಿಯಾಗಿ ಧಾರಾವಾಹಿ ಪ್ರಿಯರ ಮನಸಲ್ಲಿಯೂ ಜಾಗ ಪಡೆದಿದ್ದಾಳೆ.**

■ ಪದ್ಮನಾಭ ಭಟ್



ಆ ಗುಂಡುಮುಖದ ಮುದ್ದು ಕಂದಮ್ಮ ಗಟ್ಟಿಯಾಗಿ ಹೆಜ್ಜೆಯೂರಿ ನಡೆಯುವುದನ್ನು ಕಲಿಯುತ್ತಿರುವಾಗಲೇ ಆ ಹೆಜ್ಜೆಯಲ್ಲಿ ನೃತ್ಯದ ಲಾಲಿತ್ಯವಿತ್ತು. ಮಾತು ಕಲಿಯುತ್ತಲೇ ಅವಳಿಗೆ ಟೀವಿಯಲ್ಲಿ ಬರುವ ಸಿನಿಮಾಗಳ ಡೈಲಾಗ್‌ಗಳನ್ನು ಹೇಳುವ ಉಮೇದು. ಸಾಮಾನ್ಯವಾಗಿ ಮಕ್ಕಳು ಸೈಕಲ್ ಬೇಕು, ಆಟಿಕೆ ಬೇಕು ಎಂದೆಲ್ಲ ಹಟ ಮಾಡುತ್ತಿದ್ದರೆ ಆ ಹುಡುಗಿ ಎರಡನೇ ತರಗತಿಗೆ ಹೋಗುವಷ್ಟರಲ್ಲಿ 'ಡಾನ್ಸ್ ಕ್ಲಾಸ್‌ಗೆ ಸೇರಿಕೊಳ್ಳುತ್ತೇನೆ' ಎಂದು ರಚ್ಚೆ ಹಿಡಿಯಲಾರಂಭಿಸಿದ್ದಳು. ಎಳವೆಯಲ್ಲಿಯೇ ನೃತ್ಯದತ್ತ ಒಲವು ಬೆಳೆಸಿಕೊಂಡ ಮಗಳನ್ನು ನಿರಾಸೆಗೊಳಿಸಲು ಅಪ್ಪ ಅಮ್ಮನಿಗೂ ಕಾರಣಗಳಿರಲಿಲ್ಲ. ಮಗಳನ್ನು ಅವರು ಡಾನ್ಸ್ ಕ್ಲಾಸ್‌ಗೆ ಸೇರಿಸಿದರು. ಒಂದಿಷ್ಟು ದಿನ ಇದ್ದು ಬಿಟ್ಟುಹೋಗುವ ಆಸಕ್ತಿಯಿದು ಎಂದುಕೊಂಡಿದ್ದ ಅವರಿಗೇ ಅಚ್ಚರಿ ಮೂಡಿಸುವಷ್ಟರ ಮಟ್ಟಿಗೆ ಆ ಪುಟಾಣಿ ಇಂದು ಜನಪ್ರಿಯಗೊಂಡಿದ್ದಾಳೆ.

ವಾತ್ಸಲ್ಯ ಹುಟ್ಟಿಸುವ ಮುದ್ದುರೂಪ ಮತ್ತು ಬೆರಗು ಮೂಡಿಸುವ ಪ್ರತಿಭೆ ಎರಡನ್ನೂ ತನ್ನೊಳಗೆ ತುಂಬಿಕೊಂಡು ಅರಳುತ್ತಿರುವ ಆ ಮೊಗ್ಗಿನ ಹೆಸರು ಮಿಲನಾ. ತುಂಬ ಜನರಿಗೆ ಈ ಹೆಸರು ಹೇಳಿದರೆ ಥಟ್ಟನೇ ಗೊತ್ತಾಗಲಿಕ್ಕಿಲ್ಲ. ಬದಲಿಗೆ ಕಲರ್ಸ್ ವಾಹಿನಿಯ 'ಶನಿ' ಧಾರಾವಾಹಿಯಲ್ಲಿ ಬಾಲಶನಿಯ ತಂಗಿ ಎಂದು ಹೇಳಿದರೆ 'ಓ... ಆ ಹುಡುಗಿ' ಎಂದು ಕಣ್ಣು ಅಚ್ಚರಿಯಲ್ಲಿ ಅಗಲವಾಗುತ್ತದೆ.

'ಮಗಳಿಗೆ ನಟನೆಯಲ್ಲಿ ಇಷ್ಟೊಂದು ಇಷ್ಟ ಇದೆ ಎಂದಾಗಲೀ, ಅವಳು ಇಷ್ಟೊಂದು ಜನಪ್ರಿಯಳಾಗುತ್ತಾಳೆ ಎಂದಾಗಲೀ ನಮಗೆ ಖಂಡಿತ ಗೊತ್ತಿರಲಿಲ್ಲ. ಡಾನ್ಸ್ ಕಲಿಯುವ ಆಸಕ್ತಿ ಇದೆ ಎಂಬ ಕಾರಣಕ್ಕೆ ಡಾನ್ಸ್ ಕ್ಲಾಸಿಗೆ ಸೇರಿಸಿದೆವು. ಅಲ್ಲಿಂದ ಡಾನ್ಸ್ ರಿಯಾಲಿಟಿ ಷೋಗೆ ಹೋಗಿ ಬಂದಳು. 'ಬಿಗ್ ಬಾಸ್' ವೇದಿಕೆಯಲ್ಲಿಯೂ ಡಾನ್ಸ್ ಮಾಡಿಬಂದಳು. ಅಲ್ಲಿ ನೋಡಿಯೇ 'ಭರ್ಜರಿ' ಸಿನಿಮಾ ತಂಡದವರು ಕ್ಲಾಸಿಗೆ ಬಂದು ಆಡಿಷನ್ ತೆಗೆದುಕೊಂಡು ಹೋಗಿ ನಟಿಸುವ ಅವಕಾಶವನ್ನೂ ಕೊಟ್ಟರು. ಅಲ್ಲಿಂದ ಮುಂದೆ ಸಿನಿಮಾಗಳು, ಜಾಹೀರಾತುಗಳು, ಧಾರಾವಾಹಿಗಳಲ್ಲಿ ನಟಿಸುತ್ತಲೇ ಬರುತ್ತಿದ್ದಾಳೆ' ಎಂದು ಮಗಳ ಬಗ್ಗೆ ಹೆಮ್ಮೆಯಿಂದ ಹೇಳಿಕೊಳ್ಳುತ್ತಾರೆ ಅಮ್ಮ ಭಾರತಿ. ಮಿಲನಾಳ ತಂದೆ ಬೋರೇಗೌಡರು ಬ್ಯಾಂಕ್ ಉದ್ಯೋಗಿ.

'ಏಪ್ರಿಲ್‌ನ ಹಿಮಬಿಂದು', ಸೀತಾರಾಮ ಕಲ್ಯಾಣ', 'ಯಜಮಾನ' ಸೇರಿದಂತೆ ಹಲವು ಸಿನಿಮಾಗಳಲ್ಲಿ ನಟಿಸಿದ್ದಾಳೆ. ಅವಳನ್ನು ಮಾತಿಗೆಳೆದರೆ ತನ್ನ ವಯೋಸಹಜ ಮುಗ್ಧತೆಯನ್ನು ಮರೆಸುವ ಹಾಗೆ ಪ್ರಬುದ್ಧವಾಗಿ ಮಾತನಾಡುವ ರೀತಿ ಅಚ್ಚರಿ ಹುಟ್ಟಿಸುತ್ತದೆ.

'ಮೊದಲ ಸಲ ಕ್ಯಾಮೆರಾ ಎದುರು ಆ್ಯಕ್ಟ್ ಮಾಡುವಾಗ ತುಂಬ ಭಯ ಇತ್ತು. ಆದರೆ ಯಾವಾಗ ಆಕ್ಷನ್ ಹೇಳಿದ್ರೋ ಎಲ್ಲವನ್ನೂ ಮರೆತು ನಟನೆ ಮಾಡಿದೆ. ತುಂಬ ಖುಷಿ ಕೊಡ್ತು. ಅಂದಿನಿಂದ ಇಂದಿನವರೆಗೂ ಕ್ಯಾಮೆರಾಗೆ ಹೆದರಿದ್ದೇ ಇಲ್ಲ. ನಟಿಸುವುದನ್ನು ತುಂಬ ಎಂಜಾಯ್ ಮಾಡ್ತೀನಿ' ಎನ್ನುತ್ತಾಳೆ ಮಿಲನಾ.

ಟೀವಿಯಲ್ಲಿ ಬರುವ ಸಿನಿಮಾಗಳ ಡೈಲಾಗ್‌ಗಳನ್ನು ಬರೆದುಕೊಂಡು ಬಾಯಿಪಾಠ ಮಾಡಿ, ಹಾಗೆಯೇ ನಟಿಸುವುದು ಎಂದರೆ ಅವಳಿಗೆ ಇಂದಿಗೂ ಇಷ್ಟ. ಈ ಹವ್ಯಾಸವೇ ಕ್ಯಾಮೆರಾ ಎದುರು ಸಂಭಾಷಣೆಗಳನ್ನು ಸಲೀಸಾಗಿ ಒಪ್ಪಿಸಲು ಸಹಾಯಕವಾಗಿದೆಯಂತೆ. 'ಸೆಟ್‌ನಲ್ಲಿ ಒಂದು ಕಾಗದದಲ್ಲಿ ಡೈಲಾಗ್ ಕೊಡ್ತಾರೆ. ಅವನ್ನು ನಾನು ಬಾಯಿಪಾಠ ಮಾಡುವುದಿಲ್ಲ. ಒಂದೆರಡು ಸಲ ಓದಿಕೊಂಡರೆ ತಂತಾನೆಯೇ ಬರುತ್ತದೆ' ಎನ್ನುತ್ತಾಳೆ ಮಿಲನಾ.

ಸಾಮಾನ್ಯವಾಗಿ ಸಿನಿಮಾಗಳ ನಟನೆ ಇದ್ದಾಗ ಶಾಲೆಗೆ ರಜೆ ಹಾಕಿ ಹೋಗಬೇಕಾಗುತ್ತದೆ. ಇಂಥ ಸಮಯದಲ್ಲೆಲ್ಲ ಸ್ನೇಹಿತರೇ ಅವಳಿಗೆ ನೋಟ್ಸ್ ಕೊಟ್ಟು ಉಪಕರಿಸುತ್ತಾರಂತೆ. ಅದಕ್ಕೆ ಬದಲಾಗಿ ಅವಳು ಅವರಿಗೆ ಸೆಟ್‌ನಲ್ಲಿ ನಡೆದ ಸ್ವಾರಸ್ಯಕರ ಕಥೆಗಳನ್ನು ಹೇಳಿ ರಂಜಿಸುತ್ತಾಳೆ.

ನಟಿಯರಲ್ಲಿ ರಾಧಿಕಾ ಪಂಡಿತ್ ಅಂದ್ರೆ ಇಷ್ಟಪಡುವ ಮಿಲನಾ, ನೆಚ್ಚಿನ ನಟನ ಬಗ್ಗೆ ಕೇಳಿದರೆ 'ಧ್ರುವ ಅಣ್ಣ' ಎನ್ನುತ್ತಾಳೆ. 'ಭರ್ಜರಿಯಲ್ಲಿ ಒಂದೇ ಸೀನ್ ಇತ್ತು. ಆದ್ರೆ ತುಂಬ ಚೆನ್ನಾಗಿ ನೋಡಿಕೊಂಡರು ನನ್ನ. ಅವ್ರು ನನ್ನ ಬೆಸ್ಟ್ ಫ್ರೆಂಡ್. ಈಗ ಅವರದ್ದೇ 'ಪೊಗರು' ಸಿನಿಮಾದಲ್ಲಿ ಚಾನ್ಸ್ ಕೊಡ್ತಿದಾರೆ. ಹೈದರಾಬಾದ್‌ನಲ್ಲಿ ಶೂಟಿಂಗ್ ನಡೀತಿದೆ. ಅಲ್ಲಿಯೂ ಅಷ್ಟೇ ಚೆನ್ನಾಗಿ ನೋಡ್ಕೊಳ್ತಿದಾರೆ' ಎಂದು ಖುಷಿಯಿಂದ ಹೇಳಿಕೊಳ್ಳುವ ಹುಡುಗಿಗೆ ಮುಂದೆ ನಟಿಯಾಗಿಯೇ ಬೆಳೆಯಬೇಕು ಎಂಬ ಮಹತ್ವಾಕಾಂಕ್ಷೆಯೇನೂ ಇಲ್ಲ.

'ದೊಡ್ಡವಳಾದ ಮೇಲೆ ಏನಾಗ್ತೀಯಾ?' ಎಂದು ಹೇಳಿದರೆ 'ವಿಜ್ಞಾನಿ ಆಗ್ತೀನಿ. ಅಥವಾ ಐಎಎಸ್ ಅಧಿಕಾರಿ ಆಗ್ತೀನಿ' ಎಂದು ಸ್ಪಷ್ಟವಾಗಿಯೇ ಹೇಳುತ್ತಾಳೆ. ಹಾಗಾದ್ರೆ ನಟನೆಯ ಕಥೆ ಏನು? ಎಂದು ಕೇಳಿದರೆ 'ನಂಗೆ ಈಗ ನಟನೆ ತುಂಬ ಇಷ್ಟ. ಆದರೆ ನಟಿಯಾಗಿಯೇ ಇರಬೇಕು ಅಂತ ಆಸೆಯೇನೂ ಇಲ್ಲ. ಹೀರೊಯಿನ್ ಆಗಬೇಕು ಅನ್ನೋ ಕನಸೂ ಇಲ್ಲ. ದೊಡ್ಡವಳಾದ ಮೇಲೆ ವಿಜ್ಞಾನಿ ಆಗ್ತೀನಿ. ಆಗಲೂ ಅವಕಾಶ–ಸಮಯ ಸಿಕ್ಕರೆ ನಟನೆಯನ್ನೂ ಮಾಡ್ತೀನಿ' ಎನ್ನುವ ಮಿಲನಾಳಿಗೆ ಬಾಲನಟಿಯಾಗಿಯೇ ಜನರ ಮನಸಲ್ಲಿ ಉಳಿಯುವಂಥ ಪ್ರತಿಭೆಯಂತೂ ಇದೆ. ■